ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾ ದಂ. ರವರ ನ್ಯಾಯಾಲಯ, ಪಿರಿಯಾಪಟ್ಟಣ.

ಸಿ.ಸಿ. ಸಂಃ **62/2025**

| | | |
|---|---|---|
| ಸಾಕ್ಷಿಯ ಹೆಸರುಃ | ಚಂದ್ರೇಗೌಡ | DW-1 |
| ತಂದೆಯ ಹೆಸರುಃ | ತಮ್ಮೇಗೌಡ | |
| ವಯಸ್ಸುಃ | 56 ವರ್ಷ | ಪ್ರಮಾಣೀಕರಿಸಿದ ದಿಃ 03.02.2026 |
| ಉದ್ಯೋಗಃ | ವ್ಯವಸಾಯ | |
| ವಾಸ ಸ್ಥಳಃ | ಕುಂದನಹಳ್ಳಿ ಬಿದರಕಟ್ಟೆ ಗ್ರಾಮ, ಪಿರಿಯಾಪಟ್ಟಣ ತಾಃ | |

ಮುಖ್ಯ ವಿಚಾರಣೆಃ ಆರೋಪಿ ಪರ ವಕೀಲರಿಂದಃ

1. ದೂರುದಾರರು ಹಾಗೂ ನನ್ನ ಮಗಳು ಸ್ನೇಹಿತರಾದ ಕಾರಣ ಅವರು ಆಗಾಗ ನಮ್ಮ ಮನೆಗೆ ಬಂದು ಹೋಗುತ್ತಿದ್ದರು.
2. ನಾನು ದೂರುದಾರರ ಬಳಿ 6 ಲಕ್ಷ ಸಾಲ ಪಡೆದಿಲ್ಲ. ಅವರ ಬಳಿ ನಾನು 10 ಸಾವಿರ ಸಾಲ ಪಡೆದು, ಅದಕ್ಕೆ 10 ಸಾವಿರ ಬಡ್ಡಿ ಸೇರಿಸಿ ಒಟ್ಟು 20 ಸಾವಿರ ಹಣವನ್ನು ಜಯಸ್ವಾಮಿ ರವರ ಸಮಕ್ಷಮ ವಾಪಸ್ ನೀಡಿರುತ್ತೇನೆ.
3. ನಿಪಿ - 1 ರ ಚೆಕ್ ದೂರುದಾರರ ಬಳಿ ಹೇಗೆ ಹೋಯಿತು ಎಂದು ನನಗೆ ಗೊತ್ತಿಲ್ಲ.
4. ನಾನು ಟೇಬಲ್ ಮೇಲೆ ಇಟ್ಟಿದ್ದ ಚೆಕ್ ಅವರು ನಮ್ಮ ಮನೆಗೆ ಬಂದಾಗ ಕಳುವು ಮಾಡಿಕೊಂಡು ಹೋಗಿರಬಹುದು. ಚೆಕ್ ಕಾಣೆಯಾಗಿರುವ ವಿಚಾರ ನನಗೆ ನೊಟೀಸು ಬಂದಾಗ ಗೊತ್ತಾಗಿರುತ್ತದೆ. ಆಗ ನಾನು ಅವರ ಬಳಿ ಹೋಗಿ ಕೇಳಿದಾಗ, ಕೇಸ್ ವಾಪಸ್ ಪಡೆಯುತ್ತೇವೆ ಎಂದು ತಿಳಿಸಿದರು.
5. ಅವರು ಕಳುಹಿಸಿದ ನೊಟೀಸಿಗೆ ನಾನು ಕಾರ್ತಿಕ್ ಲಾಯರ್ ಕಡೆಯಿಂದ ಪ್ರತ್ಯುತ್ತರ ನೀಡಿರುತ್ತೇನೆ.
6. ಅವರು ಕೇಸ್ ವಾಪಸ್ ಪಡೆಯುತ್ತೇವೆ ಎಂದು ಹೇಳಿದ್ದರಿಂದ ಚೆಕ್ ಕಾಣೆಯಾದ ಬಗ್ಗೆ ಪೊಲೀಸರಿಗೆ ದೂರು ನೀಡಿಲ್ಲ.
7. ದೂರುದಾರರ ಬಳಿ ನಾನು ಸಾಲ ಮಾಡುವ ದರ್ದು ಇರಲಿಲ್ಲ.
8. ದೂರುದಾರರಿಗೆ 6 ಲಕ್ಷ ಹಣ ನೀಡುವ ಆರ್ಥಿಕ ಸಾಮರ್ಥ್ಯ ಇಲ್ಲ.

9. ನಾನು ದೂರುದಾರರಿಂದ 6 ಲಕ್ಷ ಸಾಲ ಪಡೆದಿಲ್ಲ ಹಾಗೂ ಅದರ ಮರುಪಾವತಿಗಾಗಿ ಅವರಿಗೆ ನಾನು ಚೆಕ್ ನೀಡಿಲ್ಲ.

10. ನಾನು ಹಾಲಿನ ಬೋನಸ್ ಹಣ ಪಡೆಯಲು ಖಾತೆ ಮಾಡಿಸಿರುತ್ತೇನೆ.

11. ಕಾರಣ ಸದರಿ ಸುಳ್ಳು ದೂರನ್ನು ವಜಾ ಮಾಡಿಕೊಡಬೇಕಾಗಿ ಈ ಮೂಲಕ ನಾನು ಪ್ರಾರ್ಥಿಸಿಕೊಳ್ಳುತ್ತೇನೆ.

ಪಾಟೀ ಸವಾಲುಃ ದೂರುದಾರರ ಪರ ವಕೀಲರು ಸಮಯ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು.

<u>ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು</u>

<u>ಓದಿ ಹೇಳಿ ಕೇಳಿ ಸರಿ ಇದೆ ಎಂದು ಸಾಕ್ಷಿ ಒಪ್ಪಿಕೊಂಡಿರುತ್ತಾರೆ.</u>

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಪಿರಿಯಾಪಟ್ಟಣ